ನಿಯೋಜಿಸಲಾಗಿದೆ. ಈ ತರಬೇತಿಯು ಜುಲೈ 2014ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ತದನಂತರ ಸಾರ್ವಜನಿಕ ಸೇವೆಗೆ ಲಭ್ಯವಾಗುತ್ತಾರೆ ಈ ವರ್ಷದ ಅತ್ಯಂಕ್ಕೆ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಭೌಗೋಳಿಕವಾಗಿ ಅತಿ ಹೆಚ್ಚು ವಿಸ್ತೀರ್ಣ ಹೊಂದಿರುವ ತಾಲ್ಲೂಕುಗಳು

4104(4864); ಶ್ರೀ ದೊಡ್ಡನಗೌಡ ಹನಮಗೌಡ ಪಾಟೀಲ (ಕುಷ್ಟಗಿ)

ಅ) ರಾಜ್ಯದಲ್ಲಿ ಭೌಗೋಳಿಕವಾಗಿ ಅತೀ ಹೆಚ್ಚು ವಿಸ್ತೀರ್ಣ ಹೊಂದಿರುವ ತಾಲ್ಲೂಕುಗಳು ಯಾವುವು; (ವಿವರಗಳನ್ನು ನೀಡುವುದು);

ಆ) ರಾಜ್ಯದಲ್ಲಿ ಹಿಂದಿನ ಸರ್ಕಾರ ಘೋಷಣೆ ಮಾಡಿದ್ದ 43 ನೂತನ ತಾಲ್ಲೂಕುಗಳ ರಚನೆ ಕಾರ್ಯ ಯಾವ ಹಂತದಲ್ಲಿದೆ;

ಇ) ಸರ್ಕಾರವು ನೂತನ ತಾಲ್ಲೂಕುಗಳ ರಚನೆ ಮಾಡುತ್ತಿರುವುದಕ್ಕೆ ವಿಳಂಬವಾಗಲು ಕಾರಣಗಳೇನು;

ಈ) ಸದರಿ ನೂತನ ತಾಲ್ಲೂಕುಗಳ ರಚನೆ ಯಾವಾಗ ಮಾಡಲಾಗುವುದು; (ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) 1. ಹುಣಸೂರು–435378.03 ಹೆಕ್ಟೇರ್

2. ಮಡಿಕೇರಿ–416174.79 ಹೆಕ್ಟೇರ್

3. ಬಿಜಾಪುರ–267598.27 ಹೆಕ್ಟೇರ್

ಆ) ಇ) ಮತ್ತು ಈ) 2013–14ನೇ ಸಾಲಿನ ಫೆಬ್ರವರಿ ಮಾಹೆಯ ಆಯವ್ಯಯದಲ್ಲಿ 43 ತಾಲ್ಲೂಕುಗಳ ಘೋಷಣೆಯನ್ನು ಮಾಡಲಾಗಿರುತ್ತದೆ ಹಾಗೂ ಇದೇ ಸಾಲಿನ ಜುಲೈ ಮಾಹೆಯ ಆಯವ್ಯಯದಲ್ಲಿ ಎಲ್ಲ ದೃಷ್ಟಿಕೋನಗಳಿಂದ ಪರಾಮರ್ಶಿಸಿ ಹಂತ

ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಘೋಷಿಸಲಾಗಿರುತ್ತದೆ.

2014–15ನೇ ಸಾಲಿನ ಆಯವ್ಯಯದಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಸಂಬಂಧಿಸಿದಂತೆ ಯಾವುದೇ ಘೋಷಣೆ ಮಾಡಲಾಗಿರುವುದಿಲ್ಲ.

ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಹೈದರಾಬಾದ್–ಕರ್ನಾಟಕ ಭಾಗದ ಜನರಿಗೆ 371–ಜೆ ರ ಅಡಿಯಲ್ಲಿ ಅರ್ಹತಾ ಪ್ರಮಾಣ ನೀಡುವುದು

4105(4865); ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ (ಕುಷ್ಟಗಿ)

ಅ) ಹೈದರಾಬಾದ್–ಕರ್ನಾಟಕ ಭಾಗದ ಜನರಿಗೆ 371 ಜೆ ರಡಿಯಲ್ಲಿ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; ಸಂಬಂಧಿಸಿದ ಎಲ್ಲಾ ಜಿಲ್ಲೆಗಳಲ್ಲಿ ಅರ್ಹತಾ ಪ್ರಮಾಣಪತ್ರಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿ ಇದೆಯೇ;

ಆ) ಸದರಿ ಪ್ರಮಾಣ ಪತ್ರಗಳು ಯಾವ ಯಾವ ಯೋಜನೆಗಳಿಗೆ ಅತ್ಯಂತ ಅವಶ್ಯಕವಾಗಿವೆ (ವಿವರಗಳನ್ನು ನೀಡುವುದು);

ಇ) ಪ್ರಸಕ್ತ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ವಿತರಿಸಲಾದ ಪ್ರಮಾಣಪತ್ರಗಳ ಸಂಖ್ಯೆಗಳೆಷ್ಟು;

ಈ) ಹೈದರಾಬಾದ್ ಕರ್ನಾಟಕ ಭಾಗದಲ್ಲಿನ ಪ್ರತಿಯೊಬ್ಬ ನಾಗರೀಕನೂ ಈ ಪ್ರಮಾಣ ಪತ್ರಗಳನ್ನು ಪಡೆಯಲೇ ಬೇಕಾದ ಅನಿವಾರ್ಯತೆ ಇದೆಯೇ; ಸಿಂಧುತ್ವದ ಪ್ರಮಾಣ ಪತ್ರದ ಮಾದರಿಯಲ್ಲಿ ಈ ಪ್ರಮಾಣ ಪತ್ರಗಳನ್ನು ನೀಡಲು ಸರ್ಕಾರ ಚಿಂತಿಸುವುದೇ;